

ಅಭಿಮಾನಿಗಳು, ದರ್ಶನ್ ಅಭಿಮಾನಿಗಳ ವಿರುದ್ಧ ಸೋಷಿಯಲ್ ಮೀಡಿಯಾದಲ್ಲಿ ರೊಚ್ಚಿಗೆದ್ದು ಜಗಳ ಆರಂಭಿಸಿದರು. ಇಂಥ ಜಗಳವನ್ನು ನಟರು ಘನತೆಯಿಂದ, ವಿವೇಕದಿಂದ, ಸಾವಧಾನದಿಂದ ನಿರ್ವಹಿಸಬಹುದಿತ್ತು. ಹಾಗಾಗಲಿಲ್ಲ. ದರ್ಶನ್ ತಮ್ಮ ಎಂದಿನ ಮಾಸ್ ಸಿನಿಮಾ ಡೈಲಾಗ್ ಶೈಲಿಯಲ್ಲಿಯೇ ಟ್ವಿಟರ್‌ನಲ್ಲಿ 'ನನ್ನ ಅನ್ನದಾತರು, ಸೆಲೆಬ್ರಿಟಿಗಳನ್ನು ಕೆಣಕಲು/ಪ್ರಚೋದಿಸಲು ಬರದಿರಿ' ಎಂದು ಬರೆದುಕೊಂಡರು. ಇದಕ್ಕೇ ಕಾಯ್ದುಕೊಂಡಿರುವ ಹಾಗೆಯೇ ದರ್ಶನ್ ಅಭಿಮಾನಿಗಳು ಹುಯಿಲೆಬ್ಬಿಸಿದರು. ಸುದೀಪ್ ಸ್ಟಾರ್‌ಗಿರಿಯೇನು ಕಮ್ಮಿಯೇ? ತಾನು ಉತ್ತರಿಸದಿದ್ದರೆ ತನ್ನ ಪೌರುಷಕ್ಕೆ ಅವಮಾನ ಎಂದು ಭಾವಿಸಿಯೋ ಏನೋ, 'ನಾನು ನನ್ನ ಸ್ನೇಹಿತರು ಕೈಗೆ ಹಾಕಿರುವುದು ಕಡಗ, ಬಳೆ ಅಲ್ಲ...' ಎಂದು ಸುದೀಪ್ ರೋಷಾವೇಶದ ಮಾತುಗಳನ್ನು ಉಗುಳಿದರು. ಪೈಲ್ವಾನನ ಅಭಿಮಾನಿಗಳೇನು ಸಾಮಾನ್ಯರಲ್ಲ. ತಮ್ಮ ಕೈಗಿರುವುದು ಕಡಗ ಎಂಬುದನ್ನು ಮತ್ತೆ ಮತ್ತೆ ಮುಟ್ಟಿ ಖಚಿತಪಡಿಸಿಕೊಂಡು ತೋಳು ಮೇಲೇರಿಸಿದರು. 'ಸುದೀಪ್ ಬಳೆಯನ್ನಾಗಲಿ, ಕಡಗವನ್ನಾಗಲಿ ಕೈಗೆ ತೊಟ್ಟುಕೊಳ್ಳುವುದು ಸಾಧ್ಯವಿಲ್ಲ; ಕಳಚಿಹೋಗುತ್ತದೆ. ಕುತ್ತಿಗೆಗೋ, ಸೊಂಟಕ್ಕೋ ಹಾಕಿಕೊಳ್ಳಬೇಕಷ್ಟೆ' ಎಂದೆಲ್ಲ ವ್ಯಂಗ್ಯ ಮಾಡಿದವರ ಮೇಲೂ ಹರಿಹಾಯ್ದರು.

ಕನ್ನಡ ಅಭಿಮಾನ ಎಂದರೆ ಬರೀ ತೆರೆಯ ಮೇಲೆ, ಸೋಷಿಯಲ್ ಮೀಡಿಯಾಗಳಲ್ಲಿ ರೋಷಾವೇಶದ ಡೈಲಾಗ್ ಬಿಟ್ಟು 'ಮಾತಿನಲ್ಲಿ ಯುದ್ಧ ಗೆಲ್ಲಲು' ಹೊರಡುವುದಷ್ಟೇ ಅಲ್ಲ ಎಂದು ಈ ಸ್ಟಾರ್ ನಟರಿಗೆ ಇನ್ನೂ ಅರಿವಾದಂತಿಲ್ಲ. 'ಅಭಿಮಾನಿಗಳೇ ದೇವರು' ಎಂದು ಕೈಮುಗಿದು ಬಾಗಿದ, ಹಾಗೆ ಬಾಗುವುದರ ಮೂಲಕವೇ ತನ್ನ ಅಭಿಮಾನಿಗಳಿಗೂ ಬಾಗುವ ವಿನಯವನ್ನು ಕಲಿಸಿದ ರಾಜ್ ಅವರಿಂದ ಇವರು ಏನನ್ನೂ ಕಲಿತಿಲ್ಲ ಎನ್ನುವುದಕ್ಕೆ ಈ ಪ್ರಕರಣಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. 'ಸ್ಟಾರ್ ವಾರ್‌ಗೆಲ್ಲ ಅರ್ಥವಿಲ್ಲ. ಎಲ್ಲ ನಟರೂ ಸೇರಿದರೇ ಚಿತ್ರರಂಗ. ಇದನ್ನು ಅಭಿಮಾನಿಗಳು ಅರ್ಥ ಮಾಡಿಕೊಳ್ಳಬೇಕು. ಬರೀ ನಾನು, ದರ್ಶನ್, ಸುದೀಪ್, ಪುನೀತ್, ಯಶ್ ಅಷ್ಟೇ ಹೀರೊಗಳಲ್ಲ. ಇಲ್ಲಿ ಇನ್ನೂ ತುಂಬಾ ಕಲಾವಿದರಿದ್ದಾರೆ' ಎಂಬಂಥ ವಿನಯದ ಮಾತುಗಳನ್ನು ಸಮಯ ಸಿಕ್ಕಾಗಲೆಲ್ಲ ಹೇಳುತ್ತಲೇ ಬರುವ ಶಿವರಾಜ್‌ಕುಮಾರ್ ಅವರ ಮಾತುಗಳೂ ಇವರಿಗೆ ಮಾದರಿಯಾಗಿ ಕಂಡಿಲ್ಲ. 'ದಿ ವಿಲನ್' ಸಂದರ್ಭದಲ್ಲಿ 'ಅಭಿಮಾನಿಗಳು ಕಚ್ಚಾಡಿದರೆ ಇನ್ನು ಮುಂದೆ ಸಿನಿಮಾಮಂದಿರಕ್ಕೆ ಬರುವುದೇ ಇಲ್ಲ' ಎಂದು ಖಡಕ್ಕಾಗಿ ಹೇಳಿದ್ದ ಶಿವಣ್ಣ ಅವರ ಕಾಳಜಿ, ಈ ಸ್ಟಾರ್‌ಗಳ ಗೊಡ್ಡು ಅಹಂಕಾರದ ಕವಚ ಭೇದಿಸಿ ಒಳಹೋಗಲು ಸಾಧ್ಯವಾಗಿಲ್ಲ ಎನ್ನುವುದು ವಿಪರ್ಯಾಸವಲ್ಲದೆ ಇನ್ನೇನು?

ಸುದೀಪ್ ಅವರಂಥ 'ಬುದ್ಧಿವಂತ' ನಟರೇ 'ನಾನು ತೊಟ್ಟಿದ್ದು ಬಳೆಯಲ್ಲ' ಎಂಬರ್ಥದ ಮಾತುಗಳನ್ನು ಆಡಿದರೆ ಹೇಗೆ ಅರ್ಥೈಸಿಕೊಳ್ಳುವುದು? ಬಳೆ ತೊಟ್ಟವರು ಏನಾದರೂ ಸಹಿಸಿಕೊಂಡಿರಬೇಕು ಎಂದೇ? ಬಳೆ ಎನ್ನುವುದು ದೌರ್ಬಲ್ಯದ ಸಂಕೇತವೇ? ಕಡಗ ಎನ್ನುವುದು ಪೌರುಷವನ್ನು ಸಾಬೀತುಗೊಳಿಸುವ ಗುರುತೇ? ನಿಜವಾದ ಕಲಾವಿದ್ಯಾರ್ಥಿಗೆ ಬಳೆ ತೊಡುವುದು, ಸೀರೆ ಉಡುವುದು ಯಾವುದೂ ಅವಮಾನ ಅಲ್ಲ. ಕಮಲ ಹಾಸನ್, ವಿಜಯ್ ಸೇತುಪತಿ ಅವರಂಥ ಮೇರು ನಟರೇ ಪಾತ್ರಕ್ಕೆ ಅನುಗುಣವಾಗಿ ಸೀರೆಯುಟ್ಟು ನಟಿಸಿದ್ದಿದೆ. ಬಹುಶಃ ಆ ಕಾರಣಕ್ಕಾಗಿಯೇ ಅವರೊಳಗಿನ ನಟನೂ ಮಾಗಿರಬೇಕು.

ನಮ್ಮ ಸ್ಟಾರ್ ನಟರಾದ ಸುದೀಪ್, ದರ್ಶನ್ ಅವರಂಥ ಅಹಂಕಾರಿಗಳು ನಿಜವಾಗಲೂ ಬಳೆ ತೊಟ್ಟುಕೊಳ್ಳಬೇಕು; ಸೀರೆ ಉಟ್ಟುಕೊಳ್ಳಬೇಕು. ಆಗಲಾದರೂ ಅವರ ಪೌರುಷದ ಅಹಂಕಾರ ತಗ್ಗಿ, ಹುಸಿ ವೀರಾವೇಷದ ಮಾತಿಗೆ ಮನುಷ್ಯತ್ವದ, ಮಮತೆಯ ಸ್ಪರ್ಶ ಸಿಕ್ಕೀತು.

ಪ್ರತಿಕ್ರಿಯಿಸಿ: feedback@sudha.co.in

---

ಇರುತ್ತದಂತೆ. ಅದಿತಿ ಪ್ರಭುದೇವ ಇದರ ನಾಯಕಿ. ಕದ್ರಿ ಮಣಿಕಾಂತ್ ಸಂಗೀತ ಹೊಸೆಯುತ್ತಿದ್ದಾರೆ. ರಾಕೇಶ್ ಛಾಯಾಗ್ರಹಣ ಇರಲಿದೆ.

ಸೆಲೆಬ್ರೆಟಿ ಫೋಟೊಗ್ರಾಫರ್, ಸಂಗೀತ ಸಂಯೋಜಕನೂ ಆಗಿರುವ ಅಭಿಷೇಕ್ ಎಸ್. ಎನ್. ಈ ಚಿತ್ರಕ್ಕೆ ದಯಾಳ್ ಜೊತೆ ಚಿತ್ರಕಥೆ ಬರವಣಿಗೆ ಮಾಡಿದ್ದಾರೆ. ಚಿತ್ರದ ಸ್ಥಿರ ಛಾಯಾಗ್ರಾಹಕರಾಗಿಯೂ ಅವರು ಕೆಲಸ ಮಾಡುತ್ತಿದ್ದಾರೆ.

ಒಂದೇ ದಿನದಲ್ಲಿ ನಡೆಯುವ ಕಥೆಯನ್ನು ಬಿಗಿಯಾದ ಸ್ಕ್ರೀನ್ ಪ್ಲೇ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ದಯಾಳ್ ಮಾಡಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಮುಹೂರ್ತ ಬೆಂಗಳೂರಿನಲ್ಲಿ ನಡೆಯಿತು. ತಮಿಳಿನ ನಟ ಆರ್ಯ ಈ ಚಿತ್ರಕ್ಕೆ ಕ್ಲ್ಯಾಪ್ ಮಾಡಿ ಶುಭಕೋರಿದ್ದು ವಿಶೇಷ.

ಸದ್ಯಕ್ಕೆ ಚಿತ್ರದ, ಕಥೆಯ ಬಗ್ಗೆ ಹೆಚ್ಚಿಗೇನೂ ಸುಳಿವು ಬಿಟ್ಟುಕೊಡದ ದಯಾಳ್, "ಇದು ಕಮರ್ಷಿಯಲ್ ಮಾದರಿಯಲ್ಲಿಯೇ ವಿಭಿನ್ನ ಚಿತ್ರವಾಗಿರಲಿದೆ' ಎಂದು ಮಾತ್ರ ಸ್ಪಷ್ಟವಾಗಿ ಹೇಳುತ್ತಾರೆ. ಜನವರಿ ತಿಂಗಳಲ್ಲಿ ತೆರೆಗೆ ತರುವ ಯೋಚನೆಯನ್ನು ಅವರು ಹಾಕಿಕೊಂಡಿದ್ದಾರೆ.

